# ಒಂದೂವರೆ ದಶಕದ ಕನಸು



ಅದ್ವೈತ್ ಚಂದನ್

ಅದ್ವೈತ್ ಚಂದನ್ ಸಿನಿಮಾ ನಿರ್ದೇಶಕ ಆಗಬೇಕೆಂದು ಒಂದೂವರೆ ದಶಕ ಕಷ್ಟಪಟ್ಟವರು. 'ಸೀಕ್ರೇಟ್ ಸೂಪರ್ ಸ್ಟಾರ್' ಅವರ ಆ ಕನಸು ನನಸಾದ ಚಿತ್ರ. ಜಾಹೀರಾತು ಚಿತ್ರಗಳಲ್ಲಿ ಸಹಾಯಕನಾಗಿ ಕೆಲಸ ಮಾಡಿ ಕೈಪಳಗಿಸಿಕೊಂಡ ಅದ್ವೈತ್, 'ತಾರೆ ಜಮೀನ್ ಪರ್' ಸಿನಿಮಾ ಸೆಟ್ಟೇರಿದಾಗ ಪರಿಕರಗಳನ್ನು ಒದಗಿಸುವ ಕೆಲಸಕ್ಕೆ ಸೇರಿಕೊಂಡರು. ಆಮೇಲೆ 'ಧೋಬಿ ಘಾಟ್' ಚಿತ್ರಕ್ಕೆ ಸಹಾಯಕ ನಿರ್ದೇಶಕ ಆದರು. ಅಮೀರ್ ಖಾನ್ ಆಪ್ತ ಸಹಾಯಕರಾಗಿ ಕೆಲಸ ಮಾಡುವ ಅವಕಾಶ ಸಿಕ್ಕಾಗ ಅದನ್ನೂ ಒಪ್ಪಿಕೊಂಡರು. ಮಹಾ ವಾಚಾಳಿಯಾದ ಅವರು ಇಂಥದೊಂದು ಸಿನಿಮಾ ಮಾಡಬಲ್ಲರು ಎಂಬ ಭರವಸೆ ಮೊದಲು ಅಮೀರ್ ಖಾನ್‌ಗೆ ಇರಲಿಲ್ಲವಂತೆ. ಈಗ ಈ ಯುವಕನನ್ನು ಚಿತ್ರೋದ್ಯಮ ಬೆರಗುಗಣ್ಣಿನಿಂದ ನೋಡುತ್ತಿದೆ.

| | | |
|---|---|---|
| ಚಿತ್ರ | : | **ಸೀಕ್ರೇಟ್ ಸೂಪರ್ ಸ್ಟಾರ್** |
| ನಿರ್ದೇಶನ | : | **ಅದ್ವೈತ್ ಚಂದನ್** |
| ಭಾಷೆ | : | **ಹಿಂದಿ** |

ಇವೆಲ್ಲ 'ಬ್ಲ್ಯಾಕ್ ಆ್ಯಂಡ್ ವೈಟ್' ಭಿತ್ತಿಯಲ್ಲಿನ ಬಿಡಿಸಿ ನೋಡಬಹುದಾದ ಸಂಗತಿಗಳು.

ಸಿನಿಮಾ ಮೊದಲ ದೃಶ್ಯದಿಂದ ಕೊನೆಯ ದೃಶ್ಯದವರೆಗೆ ನೋಡಿಸಿಕೊಳ್ಳುತ್ತದೆ; ಅದೂ ಮೈಮರೆಸಿ. ಪ್ರವಾಸಕ್ಕೆ ಹೋಗುವ ಮಗಳು ತನ್ನದೇ ಸ್ವರ ಸಂಯೋಜನೆಯ ಹಾಡೊಂದನ್ನು ರೈಲಿನಲ್ಲಿ ಹಾಡುತ್ತಾಳೆ. ಅದರ ಸಾಹಿತ್ಯವೂ ಅವಳದ್ದೇ. ಅವಳ ಸಂಗೀತ ಪ್ರೀತಿಗೆ ಸ್ವಂತಿಕೆಯ ಪೋಷಾಕು ತೊಡಿಸುವ ನಿರ್ದೇಶಕರ ಜಾಣ್ಮೆ ಅಲ್ಲಿಯೇ ಕಾಣುತ್ತದೆ.

ಅವಳು ರೈಲು ಇಳಿದಾಗ, ಮನೆಗೆ ಕರೆದುಕೊಂಡು ಹೋಗಲು ಬಂದ ಅಮ್ಮನ ಕಪಾಳದ ಮೇಲೆ ಕೈಗುರುತು ಇರುತ್ತದೆ. ಕಪಾಳಮೋಕ್ಷ ಆಗಿರುವುದು ಕಥಾನಾಯಕನ ಅಪ್ಪನಿಂದಲೇ ಎನ್ನುವುದನ್ನು ಯಾರ ಸಂಭಾಷಣೆಯೂ ಹೇಳುವುದಿಲ್ಲ. ಆದರೆ, ನೋಡುವ ನಮಗೆ ತಾನೇ ತಾನಾಗಿ ಅದು ಗೊತ್ತಾಗುತ್ತದೆ. ಆ ಪೆಟ್ಟಿನಿಂದ ಕಿಂಚಿತ್ತೂ ವಿಚಲಿತಳಾಗದ ಅಮ್ಮ, ಈ ಕಾಲದ ಗಟ್ಟಿಗಿತ್ತಿಯಂತೆ ಕಾಣುವುದು ನಿರ್ದೇಶಕರ ಹಸನಾದ ಶಿಲ್ಪದ ಅನಾವರಣವೂ ಹೌದು. ಅವರಿಬ್ಬರ ಹೋರಾಟದ ಪಯಣದ ಮುನ್ನುಡಿಯಾಗಿಯೂ ಅದನ್ನು ನೋಡಬಹುದು.

ಸೀಕ್ರೇಟ್ ಸೂಪರ್ ಸ್ಟಾರ್ ಹುಡುಗನೂ ಆಗಬಹುದಿತ್ತು. ಆದರೆ, ಅದ್ವೈತ್ ಅದನ್ನು ಹೆಣ್ಣುಮಕ್ಕಳ ಚಿತ್ರವಾಗಿಸಿರುವುದರಲ್ಲೇ ಅವರ 'ಟಾರ್ಗೆಟ್ ಆಡಿಯೆನ್ಸ್' ಅರ್ಥಾತ್ ಉದ್ದೇಶಿತ ಪ್ರೇಕ್ಷಕರು ಯಾರು ಎನ್ನುವುದನ್ನು ಅರ್ಥ ಮಾಡಿಕೊಳ್ಳಬಹುದು. ಹೆಣ್ಣುಮಕ್ಕಳ ಮನಸ್ಸನ್ನು ಗೆದ್ದರೆ, ಸಿನಿಮಾ ಗೆದ್ದಂತೆಯೇ ಸರಿ ಎಂಬ ಧೋರಣೆಯೂ ಇರಬಹುದು. ಅದು ತಪ್ಪೂ ಅಲ್ಲ.

ಕಥಾನಾಯಕಿ ಸಣ್ಣ ಪಟ್ಟಣದವಳು, ಕಟ್ಟಾ ಮುಸ್ಲಿಂ ಕುಟುಂಬದವಳು ಎನ್ನುವುದು ಭಾವತೀವ್ರತೆ ದಕ್ಕಿಸಿಕೊಡುವ ದಾರಿ. ತಾನು ಹಾಡಬೇಕು. ಜನಪ್ರಿಯಳಾಗಬೇಕು. ಅದು ಅಪ್ಪನಿಗೆ ಮಾತ್ರ ಗೊತ್ತಾಗಬಾರದು. ಅದನ್ನು ಸಾಧ್ಯವಾಗಿಸುವುದು ಕೂಡ ಧರ್ಮ. ಆ ಹುಡುಗಿ ಬುರ್ಖಾ ಹಾಕಿಕೊಂಡು ಗಿಟಾರ್ ಹಿಡಿದು ನಿಲ್ಲುತ್ತಾಳೆ. ಬುರ್ಖಾ ಭವಬಂಧನದ ಸಂಕೇತದಂತೆ ಕಂಡರೆ,